# ಸ್ವಾಮಿ ಸಿದ್ಧೇಶ್ವರಾನಂದರು

**ಸ್ವಾಮಿ ರಾಘವೇಶಾನಂದ**

ಮೈಸೂರು ಶ್ರೀರಾಮಕೃಷ್ಣ ಆಶ್ರಮವನ್ನು ಆರಂಭಿಸಿದವರೂ, ಅದರ ಮೊದಲ ಅಧ್ಯಕ್ಷರೂ ಆಗಿದ್ದ ಸ್ವಾಮಿ ಸಿದ್ಧೇಶ್ವರಾನಂದರ ಜೀವನ ಹಾಗೂ ಕಾರ್ಯಗಳನ್ನು ಕುರಿತಂತೆ ಅನೇಕ ಮಾಹಿತಿಗಳನ್ನೊಳಗೊಂಡ ಲೇಖನವನ್ನು ಪ್ರಕಟಿಸುತ್ತಿದ್ದೇವೆ. ಈ ಕುರಿತು ಸಾಕಷ್ಟು ಮಾಹಿತಿಗಳನ್ನು ಕಲೆಹಾಕಿ ಬರೆದಿರುವ ಲೇಖಕರು ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳು; ಹಾಗೂ ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಅವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

## ಭಾಗ ೧

ರಾಮಕೃಷ್ಣ ಮಹಾಸಂಘದ ಸನ್ಯಾಸಿಗಳಲ್ಲಿ ಒಬ್ಬರಾದ ಸ್ವಾಮಿ ಸಿದ್ಧೇಶ್ವರಾನಂದಜಿಯವರು ೧೮೯೭ ರ ಅಕ್ಟೋಬರ್ ೨೯ ರಂದು ಕೇರಳದ ತ್ರಿಚೂರ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಜನಿಸಿದರು.ಅವರ ಮನೆದೇವರು ಶ್ರೀಕೃಷ್ಣ. ಆದುದರಿಂದ ಅವರ ತಂದೆ ತಾಯಿಗಳು ಪ್ರೀತಿಯಿಂದ ಗೋಪಾಲ್ ಎಂದು ಹೆಸರಿಟ್ಟಿದ್ದರು. ಅವರ ತಂದೆ ಕೊಚ್ಚಿನ್ ರಾಜನ ಹಿರಿಯ ಸಹೋದರರಾಗಿದ್ದರಿಂದ ಗೋಪಾಲ್ ಹುಟ್ಟಿನಿಂದ ರಾಜಮನೆತನಕ್ಕೆ ಸೇರಿದವನಾಗಿದ್ದನು. ೧೯೧೪ರಲ್ಲಿ ರಾಜನ ಮರಣದ ನಂತರ, ಗೋಪಾಲ್ ತಂದೆ ರವಿವರ್ಮ ಸಿಂಹಾಸನಕ್ಕೆ ತುಂಬಾ ಚಿಕ್ಕವನಾಗಿದ್ದುದರಿಂದ, ಅವರ ಬದಲಾಗಿ ಹತ್ತಿರದ ಸಂಬಂಧಿ ಸಿಂಹಾಸನವನ್ನು ಏರಿದರು.

ಬಾಲ್ಯದಿಂದಲೇ ಗೋಪಾಲನಿಗೆ ಸಂಗೀತದ ಬಗ್ಗೆ ಒಲವಿತ್ತು. ಒಮ್ಮೆ ಅವನು ತನ್ನ ತಂದೆಯೊಂದಿಗೆ ಮದ್ರಾಸಿಗೆ ( ಈಗಿನ ಚೆನ್ನೈ) ಒಂದು ಕರ್ನಾಟಕ ಸಂಗೀತ ಕಾರ್ಯಕ್ರಮ ಕೇಳಲು ಹೋಗಿದ್ದನು. ಅಲ್ಲಿ ಅವನಿಗೆ ಶ್ರೀ ರಾಮಕೃಷ್ಣ ಮಠದ ಒಬ್ಬರು ಸಂನ್ಯಾಸಿಯನ್ನು (ಬಹುಶಃ ಮಠದಲ್ಲಿ) ನೋಡುವ ಅವಕಾಶ ದೊರೆಯಿತು. ಅವರು ಬೇರಾರೂ ಅಲ್ಲ; ಶ್ರೀ ರಾಮಕೃಷ್ಣರ ನೇರ ಸಂನ್ಯಾಸಿ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರಾಗಿದ್ದರು. ಹಿಂದಿರುಗಿದಾಗ ಅವರಿಗೆ ಅವರು ತೊಟ್ಟಿದ್ದ ಕಾವಿ ಬಟ್ಟೆ ಮಾತ್ರ ನೆನಪಿತ್ತು. ಬಾಲ್ಯದಿಂದಲೇ ಅವನು ತಮ್ಮ ತಾಯಿಯ ಮಾರ್ಗದರ್ಶನದಲ್ಲಿ ಭಗವದ್ಗೀತೆ, ಪುರಾಣಗಳನ್ನು ಅಧ್ಯಯನ ಮಾಡುತ್ತಿದ್ದನು. ತನ್ನ ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಯ ಶಾಲೆಯಲ್ಲಿ ಮುಗಿಸಿದನು . ಕಲಿಕೆಯ ಬಗ್ಗೆ ಅವನಿಗಿದ್ದ ಆಸಕ್ತಿಯನ್ನು ಕಂಡು ಆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಗೋಪಾಲಕೃಷ್ಣ ಐಯ್ಯರ್ ಅವರು ಗೋಪಾಲನಿಗೆ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಪರಿಚಯಿಸಿದರು. ಗೋಪಾಲಕೃಷ್ಣ ಐಯ್ಯರ್ ಕೂಡ ಶ್ರೀರಾಮಕೃಷ್ಣರ ಭಕ್ತರಾಗಿದ್ದರು. ಹನ್ನೆರಡನೇ ವಯಸ್ಸಿನಲ್ಲಿ 'ಶ್ರೀ ರಾಮಕೃಷ್ಣ ವಚನವೇದ' ಗೋಪಾಲನನ್ನು ತುಂಬಾ ಆಕರ್ಷಿಸಿತು. ಅವನು



ಅದನ್ನು ಶ್ರದ್ಧೆಯಿಂದ ಓದಲಾರಂಭಿಸಿದನು. ಇದಲ್ಲದೆ ಧ್ಯಾನವನ್ನೂ ಅಭ್ಯಾಸ ಮಾಡುತ್ತಿದ್ದನು.

೧೯೧೪ರಲ್ಲಿ ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿ, ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ, ಆಗಿನ ಪ್ರಸಿದ್ಧ ಕಾಲೇಜಾದ ಪ್ರೆಸಿಡೆನ್ಸಿ ಕಾಲೇಜು ಸೇರಿದನು. ಆಗ ಆ ಕಾಲೇಜಿನಲ್ಲಿ ಮುಂದೆ ಭಾರತದ ರಾಷ್ಟ್ರಪತಿಯಾದ ಡಾ. ಸರ್ವಪಲ್ಲಿ ರಾಧಾಕೃಷ್ಣರು ಕೂಡ ವಿದ್ಯಾರ್ಥಿಯಾಗಿದ್ದರು. ಇಬ್ಬರೂ ಪರಮ ಮಿತ್ರರಾದರು. ಗೋಪಾಲನಿಗೆ ತತ್ತ್ವಶಾಸ್ತ್ರದಲ್ಲಿ ಹಾಗೂ ಇತಿಹಾಸದಲ್ಲಿ ತುಂಬಾ

ಆಸಕ್ತಿಯಿತ್ತು. ಈ ವಿಷಯಗಳನ್ನು ಅವರು ತಮ್ಮ ಜೀವನದ ಕೊನೆಯವರೆಗೂ ಇಷ್ಟಪಡುತ್ತಿದ್ದರು ಮತ್ತು ಆಳವಾಗಿ ಅಧ್ಯಯನ ಮಾಡಿ ಪಾಂಡಿತ್ಯವನ್ನು ಪಡೆದಿದ್ದರು. ಇದೇ ಸಮಯದಲ್ಲಿ ಮದ್ರಾಸಿನ, ಮೈಲಾಪುರದಲ್ಲಿರುವ ರಾಮಕೃಷ್ಣ ಮಠದ ಸಂಪರ್ಕಕ್ಕೆ ಬಂದರು. ೧೯೧೭ರಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ಮದ್ರಾಸಿಗೆ ಬಂದಿದ್ದಾಗ, ಶ್ರೀರಾಮಕೃಷ್ಣರ ಜನ್ಮದಿನದಂದು ಮಂತ್ರದೀಕ್ಷೆಯನ್ನು ಪಡೆದರು. ಸಂನ್ಯಾಸಿ ಜೀವನಕ್ಕೆ ಆಕರ್ಷಿತರಾಗಿ ೧೯೨೦ರ ಏಪ್ರಿಲ್ ತಿಂಗಳಿನಲ್ಲಿ ಗೋಪಾಲ್ ಶ್ರೀ ರಾಮಕೃಷ್ಣ ಮಹಾಸಂಘವನ್ನು ಮದ್ರಾಸ್ ಮಠದ ಮೂಲಕ ಸೇರಿದರು.



ಅಲ್ಲಿ ಅವರು ಒಂದು ವರ್ಷ ಬ್ರಹ್ಮಚಾರಿಯಾಗಿ ಸೇವೆ ಸಲ್ಲಿಸಿದರು. ಆಗ ಮದ್ರಾಸ್ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಶರ್ವಾನಂದರು ಇವರ ಅಪರಿಮಿತ ಜ್ಞಾನವನ್ನು ಮೆಚ್ಚಿ, ಅಲ್ಲಿಂದ ಪ್ರಕಟವಾಗುತ್ತಿದ್ದ 'ವೇದಾಂತ ಕೇಸರಿ' ಎಂಬ ಮಾಸಿಕ ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದರು. ೧೯೨೧ರ ಅಕ್ಟೋಬರ್ ೧೬ರಂದು ಅವರು ಸ್ವಾಮಿ ಬ್ರಹ್ಮಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದರು. ಅಂದಿನಿಂದ ಅವರ ಹೆಸರು ವಿಶುದ್ಧ ಚೈತನ್ಯ ಎಂದಾಯಿತು. ಅವರು ಬ್ರಹ್ಮಚರ್ಯ ಪಡೆದ ದಿನವೇ ಇನ್ನಿಬ್ಬರು ಬ್ರಹ್ಮಚಾರಿಗಳು ಸ್ವಾಮಿ ಬ್ರಹ್ಮಾನಂದರಿಂದ ಸನ್ಯಾಸ ದೀಕ್ಷೆಯನ್ನು ಪಡೆದು, ಸ್ವಾಮಿ ಅಖಿಲಾನಂದ ಮತ್ತು ಸ್ವಾಮಿ ಪ್ರಭವಾನಂದ ಎಂಬ ಹೆಸರನ್ನು ಪಡೆದರು. ೧೯೨೪ರ ಫೆಬ್ರವರಿ ೨೭ರಂದು ಬ್ರಹ್ಮಚಾರಿ ವಿಶುದ್ಧ ಚೈತನ್ಯರು ರಾಮಕೃಷ್ಣ ಮಹಾಸಂಘದ ಎರಡನೇ ಅಧ್ಯಕ್ಷರಾದ ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು 'ಸ್ವಾಮಿ ಸಿದ್ಧೇಶ್ವರಾನಂದ' ಎಂಬ ಹೆಸರನ್ನು ಪಡೆದರು.

೧೯೨೬ರಲ್ಲಿ ಸಿದ್ಧೇಶ್ವರಾನಂದರ ತಂದೆ, ತಾಯಿಯರು ಬೇಲೂರು ಮಠಕ್ಕೆ ಹೋಗಿ ಸ್ವಾಮಿ ಶಿವಾನಂದರಿಂದ ಮಂತ್ರ ದೀಕ್ಷೆಯನ್ನು ಪಡೆದರು. ಹೀಗೆ ಇಡೀ ಕುಟುಂಬವೇ ಧನ್ಯವಾದಂತಾಯಿತು. ೧೯೨೫ರಲ್ಲಿ ಸ್ವಾಮಿ ಶಿವಾನಂದರು, ಸಿದ್ಧೇಶ್ವರಾನಂದರಿಗೆ ಮೈಸೂರಿನಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿ ಜಗನ್ಮಾತೆಯನ್ನು ಪ್ರಾರ್ಥಿಸಿ, ಮೈಸೂರಿನಲ್ಲೇ ಒಂದು ಹೊಸ ಆಶ್ರಮವನ್ನು ಸ್ಥಾಪಿಸಲು ಹೇಳಿದರು. ಸಿದ್ಧೇಶ್ವರಾನಂದರ ಆರೋಗ್ಯ ಸರಿ ಇಲ್ಲದ ಕಾರಣಕ್ಕಾಗಿ ಹಾಗೂ ಹಣದ ಕೊರತೆಯಿಂದ ಹೊಸ ಆಶ್ರಮ ನಿರ್ಮಾಣ ಮಾಡುವ ಕೆಲಸ ತುಂಬಾ ಕಷ್ಟಕರವಾಗಿತ್ತು. ಆದರೂ ಸ್ವಾಮಿ ಸಿದ್ಧೇಶ್ವರಾನಂದರು, ಜೂನ್ ೧೧, ೧೯೨೫ರಂದು ಮೈಸೂರಿನಲ್ಲಿ ರಾಮಕೃಷ್ಣ ಮಠವನ್ನು ಸ್ಥಾಪಿಸಿದರು. ಇದೇ ಸಮಯದಲ್ಲಿ ಒಂದು ಸ್ವಾರಸ್ಯಕರ ಸಂಗತಿ ನಡೆಯಿತು.

ಸ್ವಾಮಿ ಶಿವಾನಂದರು ಮದ್ರಾಸಿನಿಂದ ತಮ್ಮ ಆರೋಗ್ಯ ಸುಧಾರಿಸಿಕೊಳ್ಳಲು ಊಟಿಯಲ್ಲಿ ಬಂದು ತಂಗಿದ್ದರು. ಅಲ್ಲಿಗೆ ಕೇರಳದಿಂದ ಶಂಕರ ಮೆನನ್ ಎಂಬ ಯುವಕ ಊಟಿಗೆ ಬಂದು ಶಿವಾನಂದರಿಂದ ದೀಕ್ಷೆ ಪಡೆದು ಆಶ್ರಮ ಸೇರಬೇಕೆಂಬ ಸಂಕಲ್ಪದಿಂದ  ಅವರ ಜೊತೆಯಲ್ಲೇ ಇದ್ದ. ಆಗಲೇ ಸ್ವಾಮಿ ಸಿದ್ಧೇಶ್ವರಾನಂದರು ಅವರ ಗುರುಗಳನ್ನು ನೋಡಲು, ಊಟಿಗೆ ಬಂದು ಕೆಲವು ದಿನ ತಂಗಿದ್ದರು. ಸ್ವಾಮಿ ಶಿವಾನಂದರು ಸಿದ್ಧೇಶ್ವರಾನಂದರಿಗೆ ಶಂಕರನನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಬ್ರಹ್ಮಚಾರಿಯಾಗಿ ಸೇರಿಸಿಕೊಳ್ಳಲು ತಿಳಿಸಿದರು. ಆಗ ಊಟಿಯಲ್ಲಿ ಇನ್ನೂ ರಾಮಕೃಷ್ಣ ಮಠ ಆರಂಭವಾಗಿರಲಿಲ್ಲ. ಸ್ವಾಮಿ ಶಿವಾನಂದರು ಶಂಕರನಿಗೆ ಮೈಸೂರಿಗೆ ಹೋಗಿ ಸ್ವಾಮಿ ಸಿದ್ಧೇಶ್ವರಾನಂದರ ಸೇವೆ ಮಾಡಲು ತಿಳಿಸಿದರು. ಈ ರೀತಿ ಸ್ವಾಮಿ ಸಿದ್ಧೇಶ್ವರಾನಂದರು ಶಂಕರನನ್ನು ಮೈಸೂರಿನಲ್ಲಿ ಬ್ರಹ್ಮಚಾರಿಯಾಗಿ ಸೇರಲು, ೧೯೨೬ರ ಜೂನ್ ೨೫ರಂದು ಕರೆದುಕೊಂಡು ಬಂದರು. ಶಂಕರ್ ಮೈಸೂರಿನ ಆಶ್ರಮದಲ್ಲಿ ಬ್ರಹ್ಮಚಾರಿಯಾಗಿ ಸೇರಿಕೊಂಡು ಮುಂದೆ 'ಸ್ವಾಮಿ ರಂಗನಾಥಾನಂದಜಿ' ಎಂದು ಪ್ರಸಿದ್ಧರಾದರು ಮತ್ತು ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷ ರಾದರು.

ಮೈಸೂರು ಆಶ್ರಮ ಆರಂಭದ ದಿನಗಳಲ್ಲಿ ಹಣದ ಕೊರತೆಯಿಂದ ಅತೀವ ದುರವಸ್ಥೆಯಲ್ಲಿತ್ತು. ಒಂದು ದಿನವಂತೂ ಶ್ರೀ ರಾಮಕೃಷ್ಣರಿಗೆ ನೈವೇದ್ಯ ಕೊಡಲು ಏನೂ ಇರಲಿಲ್ಲ. ಸ್ವಾಮಿ ಸಿದ್ಧೇಶ್ವರಾನಂದರು ಏನು ಮಾಡಬೇಕೆಂದು ತೋಚದೆ, ದೇವಸ್ಥಾನದಲ್ಲಿ ಶ್ರೀ ರಾಮಕೃಷ್ಣರ ಮುಂದೆ ಹೋಗಿ ಆಹಾರದ ಕೊರತೆಯಿಂದ ಆಶ್ರಮವನ್ನು ಮುಚ್ಚಬೇಕಾಗುತ್ತದೆ ಎಂದು ಗೋಳಾಡಿಕೊಂಡು ಅಳಲಾರಂಭಿಸಿದರು. ಸ್ವಲ್ಪ ಹೊತ್ತಾದ ಮೇಲೆ ಯಾರೋ ಬಾಗಿಲನ್ನು ತಟ್ಟಿದರು. ಯಾರು ಎಂದು ನೋಡಿದಾಗ ಅರಮನೆಯಿಂದ ಸಂದೇಶವಾಹಕನೊಬ್ಬ ದೊಡ್ಡ ಮೊತ್ತದ ದೇಣಿಗೆಯನ್ನು ತಂದಿದ್ದನು. ಸ್ವಾಮಿ ಸಿದ್ಧೇಶ್ವರಾನಂದರ ಕಣ್ಣಿನಲ್ಲಿ ನೀರೂರಿತು.

ಶ್ರೀರಾಮಕೃಷ್ಣರು ಹೇಗೆಲ್ಲ ಪರೀಕ್ಷಿಸಿ ಸಹಾಯಕ್ಕೆ ಬರುತ್ತಾರೆ ಎಂದು ನೆನೆದು ಸಂತಸಪಟ್ಟರು.

ಆ ಕಾಲದ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಪ್ರೋತ್ಸಾಹದಿಂದ ಸ್ವಾಮಿ ಸಿದ್ಧೇಶ್ವ ರಾನಂದರು 'ಸ್ಟಡಿ ಸರ್ಕಲ್' ಎಂಬ ಬಳಗವನ್ನು ಪ್ರಾರಂಭಿಸಿ ದರು. ಈ ಬಳಗವು ದೇಶದಲ್ಲಿರುವ ರಾಮಕೃಷ್ಣ ಸಂಘದ ಬೇರೆ ಬೇರೆ ಕೇಂದ್ರಗಳಿಂದ ಬರುವ ಸಾಧುಗಳಿಗೆ ಪೂರ್ವ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರ, ಸಾಮ್ರಾಜ್ಯಶಾಸ್ತ್ರ, ತುಲನಾತ್ಮಕ ಧರ್ಮ, ಮನೋವಿಜ್ಞಾನ ಇತ್ಯಾದಿಗಳನ್ನು ಅಧ್ಯಯನ ಮಾಡಲು ಅವ ಕಾಶ ಮಾಡಿಕೊಟ್ಟಿತು. ಈ ಅಧ್ಯಯನಗಳಿಂದ ಸಾಧುಗಳನ್ನು ತಮ್ಮ ಮುಂದಿನ ಸೇವಾ ಕಾರ್ಯಗಳಿಗೆ ಸಜ್ಜುಮಾಡಿತು. ಸ್ವಾಮಿ ಸಿದ್ಧೇಶ್ವರಾನಂದರು, ಆ ದಿನಗಳ ಪ್ರಖ್ಯಾತ ವೇದಾಂತದ ಪಂಡಿತ ರಾದ ಶ್ರೀ ವಿ. ಸುಬ್ರಹ್ಮಣ್ಯಂ ಐಯ್ಯರ್ ಹಾಗೂ ಮೈಸೂರು ರಾಜ ಮನೆತನದ ಇನ್ಸ್ಪೋರ್ವ ಬೋಧಕರನ್ನು ಈ ಬಳಗಕ್ಕೆ ಬೋಧನೆ ಮಾಡಲು ಸೇರಿಸಿದರು. ಇದಲ್ಲದೆ ಸ್ವಾಮಿ ಸಿದ್ಧೇಶ್ವರಾ ನಂದರು ತತ್ತ್ವಶಾಸ್ತ್ರದ ಸಮಸ್ಯೆಗಳನ್ನು ಬಳಗದ ಜೊತೆಗೆ ಚರ್ಚೆ ಮಾಡಲು ಪ್ರಖ್ಯಾತ ವಾಗ್ಮಿಗಳನ್ನು ಆಮಂತ್ರಿಸುತ್ತಿದ್ದರು.

ಆ ಸಮಯದಲ್ಲೇ ಕೆ.ವಿ ಪುಟ್ಟಪ್ಪನವರು, ಮೈಸೂರಿನ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಅವರು ಪ್ರತಿ ದಿನ ಸಂಜೆ ರಾಮಕೃಷ್ಣ ಆಶ್ರಮಕ್ಕೆ ಬರುತ್ತಿದ್ದರು. ಸ್ವಾಮಿ ಸಿದ್ಧೇಶ್ವರಾನಂದರೊಡನೆ ಬಹಳ ಸಮಯ ಕಳೆಯುತ್ತಿದ್ದರು. ಕುವೆಂಪು ಅವರು ಆಗ ಬರೀ ಒಬ್ಬ ವಿದ್ಯಾರ್ಥಿಯಾಗಿದ್ದರೂ, ಅವರು ಮುಂದೆ ದೊಡ್ಡ ವ್ಯಕ್ತಿಯಾಗಿ ಬೆಳೆಯುವರೆಂಬುದನ್ನು ಸ್ವಾಮಿ ಸಿದ್ಧೇಶ್ವರಾನಂದರು ತಮ್ಮ ದಿವ್ಯದೃಷ್ಟಿಯಿಂದ ಕಂಡಿದ್ದ ರೇನೋ. ಅವರು ಕುವೆಂಪುರವರ ಮೇಲೆ ಅತೀವ ಪ್ರೀತಿಯನ್ನು ಸುರಿಸುತ್ತಿದ್ದರು. ಕೆಲವು ದಿನ ಪುಟ್ಟಪ್ಪನವರು ಆಶ್ರಮಕ್ಕೆ ಬರ ಲಿಲ್ಲ. ಒಂದು ಸಂಜೆ ಸ್ವಾಮಿಗಳು ಅವರನ್ನು ಹುಡುಕಿಕೊಂಡು ಕುವೆಂಪು ಅವರು ವಾಸ ಮಾಡುತ್ತಿದ್ದ ಮಹಾರಾಜಾ ಕಾಲೇಜಿನ ಹಾಸ್ಟೆಲ್ಲಿಗೆ ಹೋದರು. ಅಲ್ಲಿ ಕುವೆಂಪು ಅವರು ಜ್ವರದಿಂದ ಮಲಗಿ ಬಿಟ್ಟಿದ್ದರು. ಅಲ್ಲಿಯ ವ್ಯವಸ್ಥೆಯು ಚೆನ್ನಾಗಿರಲಿಲ್ಲ. ಅದನ್ನು ನೋಡಿ ಸ್ವಾಮಿ ಸಿದ್ಧೇಶ್ವರಾನಂದರು ಒಂದು ಕುದುರೆ ಗಾಡಿ ಯನ್ನು ಕರೆಸಿ, ಕುವೆಂಪುರವರನ್ನು ಅವರ ಎಲ್ಲ ಸಾಮಾನು ಗಳೊಂದಿಗೆ ಆಶ್ರಮಕ್ಕೆ ಕರೆದುಕೊಂಡು ಬಂದು, ಅಲ್ಲೇ ಅವರಿಗೆ ತಂಗಲು ವ್ಯವಸ್ಥೆ ಮಾಡಿದರು. ಕೆಲವು ದಿನಗಳಾದ ಮೇಲೆ ಸ್ವಾಮಿ ಸಿದ್ಧೇಶ್ವರಾನಂದರು ಬೇಲೂರು ಮಠಕ್ಕೆ ಹೋಗುವಾಗ ಅವರ ಜೊತೆಗೆ ಕುವೆಂಪುರವರನ್ನು ಕರೆದುಕೊಂಡು ಹೋದರು. ಅಲ್ಲಿ ಕುವೆಂಪುರವರಿಗೆ ಸ್ವಾಮಿ ಶಿವಾನಂದರಿಂದ ಮಂತ್ರ ದೀಕ್ಷೆ ಯನ್ನು ಕೊಡಿಸಿದರು. ಇದಿಷ್ಟೇ ಅಲ್ಲದೆ, ಒಂದು ದಿನ ಕೊಲ್ಕತ್ತಾ ನಗರದಲ್ಲಿದ್ದ ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರಾದ ಹಾಗೂ 'ರಾಮಕೃಷ್ಣ ಕಥಾಮೃತ'ದ ಲೇಖಕರಾದ ಶ್ರೀ ಮಹೇಂದ್ರ ನಾಥ ಗುಪ್ತರವರ ಮನೆಗೆ ಕರೆದುಕೊಂಡು ಹೋಗಿ, ಅವರ ದರ್ಶನ ಮಾಡಿಸಿದರು. ಈ ರೀತಿ ಸಿದ್ಧೇಶ್ವರಾನಂದರು ತರುಣ ಕುವೆಂಪುರಲ್ಲಿ ಉನ್ನತ ವಿಚಾರಗಳ ಬೀಜಗಳನ್ನು ಬಿತ್ತಿ ಅವರನ್ನು ಶ್ರೇಷ್ಠತೆಯತ್ತ ಮುನ್ನಡೆಸಿದರು.

೧೯೩೨ನೇ ವರ್ಷದಲ್ಲಿ ಸಿದ್ಧೇಶ್ವರಾನಂದರಿಗೆ ಶ್ರೀ ರಮಣ ಮಹರ್ಷಿಗಳನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಸ್ವಾಮಿ ಸಿದ್ಧೇಶ್ವರಾನಂದರು ರಮಣಮಹರ್ಷಿಗಳನ್ನು ತುಂಬ ಗೌರವಿಸು ತ್ತಿದ್ದರು. ತಿರುವಣ್ಣಾಮಲೈಗೆ ಕೊಟ್ಟ ತಮ್ಮ ಪ್ರಥಮ ಭೇಟಿಯ ಬಗ್ಗೆ ಸಿದ್ಧೇಶ್ವರಾನಂದರು ಹೀಗೆ ನೆನಪಿಸಿಕೊಳ್ಳುತ್ತಿದ್ದರು: ''ರಮಣ ಮಹರ್ಷಿಗಳು ನನ್ನ ಎದುರು ಬಂದಾಗ ಪ್ರತಿಸಾರಿ ನಾನು ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಸಲ್ಲಿಸುತ್ತಿದ್ದೆ. ಕೆಲ ದಿನಗಳಾದ ಮೇಲೆ ಅವರು ನನ್ನನ್ನು ಕೇಳಿದರು, 'ನೀವು ಯಾಕೆ ಈ ತರಹ ನನಗೆ ಪ್ರಣಾಮ ಸಲ್ಲಿಸುತ್ತೀರಿ?' ಎಂದು. ನಾನು ಅವರಿಗೆ ಹೇಳಿದೆ, 'ನಿಮ್ಮನ್ನು ನಾನು ನೋಡಿದಾಗಲೆಲ್ಲ ತಡೆದು ಕೊಳ್ಳಲಾರದ ಈ ಭಾವನೆಗಳು ನನ್ನಲ್ಲಿ ಉಕ್ಕಿ ಹರಿಯುತ್ತವೆ. ಅದಕ್ಕೆ ನಾನು ನಿಮಗೆ ಪ್ರಣಾಮ ಸಲ್ಲಿಸುತ್ತೇನೆ.' ರಮಣ ಮಹರ್ಷಿಗಳು ಹಸನ್ಮುಖರಾಗಿ ಹೇಳಿದರು, 'ಭೇಷ್, ನೀವು ನನಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಬಹುದು. ಆದರೆ ನೀವು ನಿಮಗೇ ಪ್ರಣಾಮ ಮಾಡುತ್ತಿದ್ದೀರಿ ಎಂಬ ಭಾವನೆಯಿಂದ ಮಾಡಿದರೆ ಮಾತ್ರ.' ಅವರ ಈ ಮಾತುಗಳನ್ನು ನಾನು ಯಾವತ್ತೂ ಮರೆಯಲಾರೆ.'' ರಮಣ ಮಹರ್ಷಿಗಳ ಆ ಮಾತು ಗಳು ಸಿದ್ಧೇಶ್ವರಾನಂದರ ಮನಸ್ಸಿನ ಮೇಲೆ ದೊಡ್ಡ ಪ್ರಭಾವ ಮೂಡಿಸಿತು. ಅವರ ಜೀವನದ ದೃಷ್ಟಿಕೋನವೇ ಬದಲಾ ಯಿತು. ಸ್ವಾಮಿ ಶಿವಾನಂದರಿಗೆ ಸಿದ್ಧೇಶ್ವರಾನಂದರು ರಮಣ ಮಹರ್ಷಿಗಳನ್ನು ಭೇಟಿಯಾಗಿರುವ ಸಂಗತಿಯನ್ನು ಹೇಳಿ ವಿವ ರಿಸಿದಾಗ ಸ್ವಾಮಿ ಶಿವಾನಂದರು, 'ಆ ಸಂತರ ಬಗ್ಗೆ ಎಲ್ಲ ಮಾಹಿತಿ ಹೇಳು' ಎಂದರು. ಶ್ರೀ ರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಅಖಂಡಾನಂದರೂ ಕೂಡ ಸಿದ್ಧೇಶ್ವರಾನಂದರಿಗೆ ಮತ್ತೆ ರಮಣ ಮಹರ್ಷಿಗಳನ್ನು ಭೇಟಿಯಾಗಲು ಪ್ರೋತ್ಸಾಹ ನೀಡಿ ದರು.

ಮೇ ೧೯೩೪ ರಲ್ಲಿ ಸ್ವಾಮಿ ಸಿದ್ಧೇಶ್ವರಾನಂದರನ್ನು ಬೆಂಗ ಳೂರು ಮಠದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಎರಡು ವರ್ಷಗಳ ಕಾಲ ಅವರು ಬೆಂಗಳೂರು ಮಠದ ಅಧ್ಯಕ್ಷ ರಾಗಿದ್ದರು. ಅನಂತರ ಅವರನ್ನು ಫ್ರಾನ್ಸ್ ದೇಶದಲ್ಲಿ ರಾಮಕೃಷ್ಣ ಮಹಾಸಂಘದ ಕಾರ್ಯಗಳನ್ನು ವಿಸ್ತರಿಸಲು ಕಳುಹಿಸಲಾಯಿತು.

೧೯೩೬ರಲ್ಲಿ ಪ್ಯಾರಿಸ್‌ನಲ್ಲಿ ಜರುಗಿದ ಶ್ರೀರಾಮಕೃಷ್ಣರ ಜನ್ಮ ಶತಾಬ್ದಿಯೊಂದಿಗೆ ಫ್ರಾನ್ಸ್ ದೇಶದಲ್ಲಿ ರಾಮಕೃಷ್ಣ ಮಹಾ ಸಂಘದ ಕಾರ್ಯಗಳು ಆರಂಭವಾದವು. ಈ ಕಾರ್ಯಕ್ರಮಕ್ಕೆ

ಸ್ವಾಮಿ ಯತೀಶ್ವರಾನಂದರನ್ನು ಆಮಂತ್ರಿಸಲಾಯಿತು. ಸ್ವಾಮಿ ಯತೀಶ್ವರಾನಂದಜಿ ಯೂರೋಪಿನಲ್ಲಿ ಸೇವಾಕಾರ್ಯ ನಿರ್ವಹಿಸಿದ ರಾಮಕೃಷ್ಣ ಸಂಘದ ಪ್ರಥಮ ಸಂನ್ಯಾಸಿಗಳಾದರು. ಈ ಜನ್ಮ ಶತಾಬ್ದಿಯು ಪ್ಯಾರಿಸಿನಲ್ಲಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯವಾದ ಸೊರ್ಬೋನ್ನಿನಲ್ಲಿ ಜರಗಿತು. ಜೀನ್ ಹರ್ಬರ್ಟ್ ಎನ್ನುವ ವಿಶ್ವವಿಖ್ಯಾತ ನಿರೂಪಣಕಾರರು ಹಾಗೂ ಅವರ ಕೆಲವು ಮಿತ್ರರು 'ಫ್ರೆಂಡ್ಸ್ ಆಫ್ ಇಂಡಿಯನ್ ಥಾಟ್' ಎಂಬ ಬಳಗವನ್ನು ಫ್ರಾನ್ಸ್ ದೇಶದಲ್ಲಿ ಪ್ರಾರಂಭಿಸಿದರು. ಈ ಬಳಗದವರು ಸ್ವಾಮಿ ಯತೀಶ್ವರಾನಂದರ ಮೂಲಕ ಬೇಲೂರು ಮಠದ ವ್ಯವಸ್ಥಾಪಕರಿಗೆ ಫ್ರಾನ್ಸ್ ದೇಶಕ್ಕೆ ರಾಮಕೃಷ್ಣ ಸಂಘದ ಓರ್ವ ಸಂನ್ಯಾಸಿಗಳನ್ನು ಬೋಧನಾಕಾರ್ಯಗಳಿಗೋಸ್ಕರ ಕಳುಹಿಸಿಕೊಡಬೇಕೆಂದು ವಿನಂತಿಸಿದರು. ಸ್ವಾಮಿ ಯತೀಶ್ವರಾನಂದರು ಈ ಕೆಲಸಕ್ಕಾಗಿ ಸ್ವಾಮಿ ಸಿದ್ಧೇಶ್ವರಾನಂದರು ಸೂಕ್ತ ವ್ಯಕ್ತಿ ಎಂದು ಬೇಲೂರು ಮಠಕ್ಕೆ ಶಿಫಾರಸ್ಸು ಮಾಡಿದರು.

ಸ್ವಾಮಿ ಸಿದ್ಧೇಶ್ವರಾನಂದರು ಫ್ರಾನ್ಸಿನ ಲೇ-ಹಾರ್ವೆ ಬಂದರನ್ನು ೧೯೩೭ರ ಜುಲೈ ತಿಂಗಳ ಕೊನೆ ದಿನಗಳಲ್ಲಿ ಸೇರಿದರು. ಅವರನ್ನು ಸ್ವಾಮಿ ಯತೀಶ್ವರಾನಂದರು, ಜೀನ್ ಹರ್ಬರ್ಟ್, ಮಾರ್ಸೆಲ್ ಮತ್ತು ಮ್ಯಾಡಮ್ ಸೌಟೊಂ (ಭಕ್ತ ದಂಪತಿಗಳು) ಬರಮಾಡಿಕೊಂಡರು. ಪ್ಯಾರಿಸ್ಸಿನ ಉಪನಗರವಾದ ಸೇಂಟ್ ಮಾಂಡೆಯಲ್ಲಿರುವ ಸೌಟೊಂ ದಂಪತಿಗಳ ಮನೆಗೆ ಕರೆದುಕೊಂಡು ಹೋದರು. ಸಿದ್ಧೇಶ್ವರಾನಂದರು ತಮ್ಮ ಕೆಲಸವನ್ನು ತಕ್ಷಣವೇ ಶುರು ಮಾಡಿದರು. ಮೊದಲಿಗೆ ಅವರು 'ಕನ್ಸರ್ವೇಟರಿ ಆಫ್ ಮ್ಯೂಸಿಕ್'ನಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದರು. ಆಮೇಲೆ, ಹೆಚ್ಚುತ್ತಿರುವ ಭಕ್ತರ ಸಂಖ್ಯೆಯನ್ನು ಕಂಡು ಅವರು ಒಂದು ದೊಡ್ಡ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡರು. ಆದರೆ ಆ ಬಾಡಿಗೆ ಕೋಣೆಯ ಮಾಲಿಕನು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಭಕ್ತರನ್ನು ಕಂಡು ವಿರೋಧ ವ್ಯಕ್ತಪಡಿಸಿದನು. ಈ ಕಾರಣಕ್ಕಾಗಿ ಮುಂದಿನ ಎರಡು ತಿಂಗಳುಗಳ ಕಾಲ ಸ್ವಾಮಿ ಸಿದ್ಧೇಶ್ವರಾನಂದರು ಭಕ್ತರಿಗೆ ಅನುಕೂಲವಾಗುವಂತಹ ಸತ್ಸಂಗ ಕೇಂದ್ರಕ್ಕೋಸ್ಕರ ಇನ್ನೊಂದು ಮನೆಯನ್ನು ಹುಡುಕಾಡಿದರು. ಆದರೆ ಎಷ್ಟು ಹುಡುಕಿದರೂ ಅವರಿಗೆ ಅಂತಹ ಮನೆ ಸಿಗಲಿಲ್ಲ. ಇದರಿಂದ ಸಿದ್ಧೇಶ್ವರಾನಂದರು ನಿರಾಶೆಗೊಂಡು ಭಾರತಕ್ಕೆ ಹಿಂದಿರುಗುವ ಬಗ್ಗೆ ವಿಚಾರ ನಡೆಸಿದರು.

ಅದೇ ಸಮಯದಲ್ಲಿ ಸಿದ್ಧೇಶ್ವರಾನಂದರಿಗೆ ಒಂದು ಆಶ್ಚರ್ಯಕರ ದೂರವಾಣಿ ಕರೆ ಅಮೇರಿಕಾದಿಂದ ಬಂದಿತು. ಸ್ಯಾನ್ ಫ್ರಾನ್ಸಿಸ್ಕೋ ವೇದಾಂತ ಕೇಂದ್ರದ ಭಕ್ತರಾದ ಮ್ಯಾಡಮ್ ಡೈನೆತ್ತೆ ವೆದ್ಯದುರ್ ಅವರಿಗೆ ಸ್ವಾಮಿ ಸಿದ್ಧೇಶ್ವರಾನಂದಜಿ ಇರುವ ಉಪನಗರದಲ್ಲೇ ಒಂದು ಅಪಾರ್ಟ್ಮೆಂಟ್ ಮನೆ ಇತ್ತು. ಮ್ಯಾಡಮ್ ವೆದ್ಯದುರ್‌ರವರು ಸ್ವಾಮಿಗಳಿಗೆ ಆ ಮನೆಗೆ ಹೋಗಿ ಆ ಮನೆ ಖಾಲಿ ಇದೆಯೋ ಇಲ್ಲವೋ ಎಂದು ಪರಿಶೀಲಿಸಲು ಹೇಳಿದಳು. ಸ್ವಾಮಿಗಳು ಮತ್ತು ಅವರ ಭಕ್ತರ ತಂಡ ಆ ಮನೆಗೆ ಹೋಗಿ ಆ ಮನೆ ಖಾಲಿ ಇರುವ ಬಗ್ಗೆ ತಿಳಿದರು. ಮ್ಯಾಡಮ್ ವೆದ್ಯದುರ್ ಅವರು ಆ ಮನೆಯನ್ನು ಸ್ವಾಮಿಗಳಿಗೆ ಅವರ ಕಾರ್ಯಕ್ಕಾಗಿ ಉಪಯೋಗಿಸಲು ಕೊಟ್ಟರು. ಸ್ವಾಮಿಗಳು ಆ ಮನೆಯಲ್ಲೇ ತಮ್ಮ ಪ್ರವಚನಗಳನ್ನು ಪ್ರಾರಂಭಿಸಿದರು. ಸ್ವಲ್ಪ ಸಮಯದಲ್ಲೇ ಅವರಿಗೆ ಸೊರ್ಬೋನ್ನೇ ವಿಶ್ವವಿದ್ಯಾಲಯದಲ್ಲಿರುವ ಫ್ರಾನ್ಸಿನ ಬುದ್ಧಿಜೀವಿಗಳು ಪರಿಚಿತರಾದರು. ಮೊದಲ ಮೂರು ವರ್ಷಗಳ ಕಾಲ ಅವರು ತಮ್ಮ ಪ್ರವಚನಗಳನ್ನು ಆಂಗ್ಲ ಭಾಷೆಯಲ್ಲೇ ಮಾಡುತ್ತಿದ್ದರು. ಆದರೆ ೧೯೪೦ರ ವರೆಗೆ ಅವರು ಮಾರ್ಸೆಲ್ ಸೌಟೊಂರ ಸಹಾಯದಿಂದ ಫ್ರೆಂಚ್ ಭಾಷೆಯನ್ನು ಸಂಪೂರ್ಣವಾಗಿ ಕಲಿತು, ತಮ್ಮ ಪ್ರವಚನಗಳನ್ನು ಆ ಭಾಷೆಯಲ್ಲೇ ಮಾಡಲಾರಂಭಿಸಿದರು.

೧೯೩೮ರ ಮಾರ್ಚ್‌ನಲ್ಲಿ ಜೀನ್ ಹರ್ಬರ್ಟ್ ಸ್ವಾಮಿ ಸಿದ್ಧೇಶ್ವರಾನಂದರಿಗೆ ಜಿನೀವಾಗೆ ಭೇಟಿ ಕೊಡಲು ವಿನಂತಿಸಿಕೊಂಡರು. ಸ್ವಾಮಿಗಳು ಫ್ರಾನ್ಸ್‌ನಿಂದ ಪ್ರಥಮ ಬಾರಿಗೆ ಹೊರಗೆ ಹೋದರು. ಹರ್ಬರ್ಟ್ ಅವರ ಪ್ರಯತ್ನಗಳಿಂದ ಸ್ವಾಮಿಗಳಿಗೆ ಸ್ವಿಜರ್ಲೆಂಡ್‌ನಲ್ಲಿ ಹಲವಾರು ಭಕ್ತರನ್ನು ಭೇಟಿಯಾಗಲು ಅವಕಾಶ ಸಿಕ್ಕಿತು. ಸ್ವಾಮಿಗಳು ಜಿನಿವಾಕ್ಕೆ ಹೋಗುವಾಗ ದಾರಿಯಲ್ಲಿ ವೇಜ್ಲ್ಯಾಯ್ ಎಂಬ ಪಟ್ಟಣದಲ್ಲಿರುವ ರೋಮ ರೋಲಾ (ರೋಮ ರೋಲಾ ಸಾಹಿತ್ಯದ ಕ್ಷೇತ್ರದಲ್ಲಿ ನೊಬೆಲ್ ಪುರಸ್ಕೃತರಾದ ಫ್ರೆಂಚ್ ಸಾಹಿತಿ, ಇವರು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಫ್ರೆಂಚ್ ಭಾಷೆಯಲ್ಲಿ ಪ್ರಕಟಿಸಿದ್ದರು) ಅವರನ್ನು ಭೇಟಿಯಾದರು. ರೋಮ ರೋಲಾ ಸ್ವಾಮಿಗಳನ್ನು ಬ್ರದರ್ ಎಂದು ಕರೆಯುತ್ತಾ ಅಪ್ಪಿಕೊಂಡರು. ಜಿನೀವಾನಲ್ಲಿ ಸ್ವಾಮಿಗಳು ಹಲವಾರು ಪ್ರವಚನಗಳನ್ನು ನೀಡಿದರು.

ಸ್ವಾಮಿಗಳು ಪ್ಯಾರಿಸಿಗೆ ಹಿಂದಿರುಗಿದಾಗ ಮತ್ತೆ ಅವರಿಗೆ ವಸತಿಯ ಸಮಸ್ಯೆ ಬಂದಿತು. ಈ ಸಲ ಅವರು ತಮ್ಮ ಬೋಧನಾ ತರಗತಿಗಳನ್ನು ಸೌಟೊಂ ದಂಪತಿಗಳ ಮನೆಯಲ್ಲೇ ತೆಗೆದುಕೊಂಡರು. ಅವರು ದಿನಕ್ಕೆ ೧೦ ರಿಂದ ೧೨ ಘಂಟೆಗಳ ಕಾಲ ಬಿಡುವಿಲ್ಲದೆ ಕೆಲಸ ಮಾಡುವುದರ ಬಗ್ಗೆ ತಮ್ಮ ಮಿತ್ರನಿಗೆ ಪತ್ರದಲ್ಲಿ ಬರೆದಿದ್ದರು. ಆ ಪತ್ರದಲ್ಲಿ ಸ್ವಾಮಿಗಳು ಸೇಂಟ್ ಜಾನ್ ಆಫ್ ಕ್ರಾಸ್ ಎಂಬ ಸಂತರ ಮೇಲೆ ಲೇಖನ ಬರೆಯುವುದಾಗಿ ತಿಳಿಸಿದರು. ಸ್ವಾಮಿಗಳಿಗೆ ಕ್ರಿಶ್ಚಿಯನ್ ಮಿಸ್ಟಿಸಿಸಂ ಬಗ್ಗೆ ಇದ್ದ ಆಸಕ್ತಿಯ ಬಗ್ಗೆ ನಾವಿಲ್ಲಿ ತಿಳಿಯಬಹುದು. ಏಪ್ರಿಲ್ ೧೯೩೯ರಲ್ಲಿ ಸಿದ್ಧೇಶ್ವರಾನಂದರು ನೆದರ್ಲ್ಯಾಂಡಿಗೆ ಭೇಟಿಕೊಟ್ಟರು, ಅಲ್ಲಿಯೂ ಕೂಡ ಅವರು ಪ್ರವಚನಗಳನ್ನು ನೀಡಿದರು.

*(ಮುಂದಿನ ಸಂಚಿಕೆಗೆ)*